# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6504/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 25/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಹೆರಾಲ್ಡ್ ಡಿಸೋಜ, ಬೋರ್ಗಲ್‌ಗುಡ್ಡೆ ಹೌಸ್, ಮಣಿಪುರ ಅಂಚೆ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಹೆರಾಲ್ಡ್ ಡಿಸೋಜ ಇವರು ಗೌರವಾನ್ವಿತರ ಉಡುಪಿಯ ದೂರುಗಳ ಸ್ವೀಕಾರ ಕ್ಯಾಂಪ್‌ನಲ್ಲಿ ದೂರೊಂದನ್ನು ಸಲ್ಲಿಸಿ, ಉಡುಪಿ ತಾಲ್ಲೂಕು ಮೂಡುಬೆಳ್ಳೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಸರ್ವೇ ನಂ.318/2ಎ ಯಲ್ಲಿ 4.51 ಎಕರೆ ಜಮೀನು ಸರ್ವೇ ನಂ.282/1 ರಲ್ಲಿ 1.35 ಎಕರೆ ಜಮೀನನ್ನು ಮತ್ತು ಸರ್ವೇ ನಂ.280/7 ರಲ್ಲಿ 0.95 ಎಕರೆ ಸರ್ಕಾರಿ ಜಮೀನನ್ನು ಅತಿಕ್ರಮಣ ಮಾಡಿರುವ ಬಗ್ಗೆ ಎದುರುದಾರರಿಗೆ ಅವರ ಗಮನಕ್ಕೂ ತಂದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಸರ್ಕಾರಿ ಜಮೀನನ್ನು ಒತ್ತುವರಿಯಿಂದ ತಡೆಗಟ್ಟಲು ಮತ್ತು ಸರ್ಕಾರಕ್ಕೆ ಉಂಟಾಗುತ್ತಿರುವ ನಷ್ಟವನ್ನು ತಡೆಗಟ್ಟಲು ಎದುರುದಾರರು ಕ್ರಮ ಕೈಗೊಳ್ಳಬೇಕಾಗಿದ್ದು, ಅಂತಹ ಕ್ರಮವನ್ನು ಕೈಗೊಳ್ಳದೇ ಇರುವ ಕಾರಣ, ತಾವು ದೂರು ನೀಡಿರುವುದಾಗಿ ತಿಳಿಸಿ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಹಾಗೂ ಸರ್ಕಾರಿ ಜಾಗದ ಅತಿಕ್ರಮಣವನ್ನು ತೆರವುಗೊಳಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಗೌರವಾನ್ವಿತ ಉಪಲೋಕಾಯುಕ್ತರು ತಹಶೀಲ್ದಾರ್, ಉಡುಪಿ ಇವರಿಗೆ ಸೂಕ್ತ ಕ್ರಮ ಜರುಗಿಸಿ ವರದಿ ಸಲ್ಲಿಸುವಂತೆ ಸೂಚಿಸಿದ ಮೇರೆಗೆ ತಹಶೀಲ್ದಾರ್‌ರವರು ವರದಿಯನ್ನು ಸಲ್ಲಿಸಿದ್ದು, ದೂರುದಾರರ ಅರ್ಜಿಗೆ ಸಂಬಂಧಿಸಿದಂತೆ ರಾಜಸ್ವ ನಿರೀಕ್ಷಕರು, ಕಾಪು ಇವರಿಂದ ವರದಿಯನ್ನು ಪಡೆಯಲಾಗಿದೆ. ಬೆಳ್ಳೆ ಗ್ರಾಮದ ಸರ್ವೇ ನಂಬರ್ 318/2ಎ ರಲ್ಲಿ 4.51 ಎಕರೆ ಸರ್ಕಾರಿ ಜಮೀನಿದ್ದು, 1967-68ರ ಕೈಬರಹದ ಪಹಣಿ ಕಾಲಂ 11ರಲ್ಲಿ ರೋಬರ್ಟ್ ಆಳ್ವ, ಬಾವಿ ಕೆರೆ

ಎಂದು ದಾಖಲಾಗಿರುತ್ತದೆ. ಕೈಬರಹದ ಪಹಣಿ ಗಣಕೀಕೃತಗೊಂಡಾಗ, ಗಣಕೀಕೃತ ಪಹಣಿಯಲ್ಲೂ ದಾಖಲುಗೊಂಡಿರುತ್ತದೆ. ಸದರಿ ದಾಖಲಾತಿಯು ಇತ್ತೀಚಿನ ದಾಖಲಾತಿಯಾಗಿರದೇ ಹಳೆಯ ದಾಖಲಾತಿಯಗಿರುತ್ತದೆ. ದಿ:14/09/2012 ರಂದು ಕಂದಾಯ ನಿರೀಕ್ಷಕರು ತನಿಖೆ ಮಾಡಿ ಸದರಿ ದಾಖಲಾತಿ ಬಗ್ಗೆ ದಿವಂಗತ ರಾಬರ್ಟ್ ಆಳ್ವ ರವರ ಮಗ ಆಲ್ಫೋನ್ಸ್ ಆಳ್ವರವರು ಆರ್‌ಟಿಸಿ ಯ ಕಾಲಂ 11ರ ದಾಖಲಾತಿಯನ್ನು ರದ್ದುಪಡಿಸುವಂತೆ ಕೋರಿ ಹೇಳಿಕೆ ನೀಡಿದ್ದು, ಕಾಪು ಕಂದಾಯ ನಿರೀಕ್ಷಕರು ಸದರಿ ದಾಖಲಾತಿಯನ್ನು ರದ್ದುಪಡಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಶಿಫಾರಸ್ಸಿದಂತೆ ಸರ್ವೇ ನಂ.318/2ಎ ಯ ಪಹಣಿಯ ಕಾಲಂ 11 ರಲ್ಲಿ ದಾಖಲಾಗಿರುವ ರೋಬೋರ್ಟ್ ಆಳ್ವರವರ ಹೆಸರನ್ನು ಲೋಪ ಪಡಿಸಲು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿರುತ್ತಾರೆ. ಸದರಿ ತಹಶೀಲ್ದಾರ್‌ರವರ ವರದಿಯ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದುರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಅದರಲ್ಲಿ ಸರ್ವೇ ನಂ.318/2ಎ ಯ 4.51 ಎಕರೆ ಸರ್ಕಾರಿ ಕೆರೆಗೆ ಸಂಬಂಧಿಸಿದ ದಾಖಲೆಯನ್ನು ಪರಿಶೀಲಿಸಿದಾಗ, ಸದರಿ ಸರ್ಕಾರಿ ಕೆರೆ ಅತಿಕ್ರಮಣಕೋರದಿಂದ ತೆರವುಗೊಂಡಿಲ್ಲ, ಸರ್ವೇ ನಂ.318/2ಎ ಯ 4.51 ಎಕರೆ ಸರ್ಕಾರಿ ಕೆರೆಗೆ ಸಂಬಂಧಿಸಿದಂತೆ ಆರ್‌ಟಿಸಿ ಯನ್ನು ದಿ:29/10/2015 ರಂದು ನೀಡಿದ್ದು, ಅದರಲ್ಲಿ ಕಾಲಂ ನಂಬರ್ 11 ರಲ್ಲಿ ಅತಿಕ್ರಮಣಕೋರರ ಹೆಸರು ರಾಬರ್ಟ ಆಳ್ವ ಎಂದು ನಮೂದಿಸಲಾಗಿದೆ ಮತ್ತು ಆರ್‌ಟಿಸಿ ಯಲ್ಲಿ ಅಡಿಕೆ, ಗೇರು, ತೆಂಗು, ಮಾವು, ಹಲಸು ಎಂಬ ಉಲ್ಲೇಖವಿರುತ್ತದೆ. ಆದರೆ, ಕೆರೆಯಲ್ಲಿ ರೋಬೋರ್ಟ್ ಆಳ್ವರವರು ಕೆರೆಗೆ ಮಣ್ಣನ್ನು ತುಂಬಿ ಕೆರೆಯನ್ನು ನಾಶಪಡಿಸಿ ಕೃಷಿ ಮಾಡಿರುತ್ತಾರೆ. ಆದ್ದರಿಂದ, ಸದರಿ ಅತಿಕ್ರಮಣವನ್ನು ತೆರವುಗೊಳಿಸಿ, ಕೆರೆಯನ್ನು ಮತ್ತೆ ಪುನರ್ ನಿರ್ಮಾಣ ಮಾಡಬೇಕಾಗಿ ಹಾಗೂ ಅಕ್ರಮ ಸಕ್ರಮದಡಿ ಕೆರೆಯನ್ನು ಒತ್ತುವರಿ ಮಾಡಿರುವ ಅರ್ಜಿದಾರರ ಅರ್ಜಿಯನ್ನು ವಜಾ ಮಾಡಬೇಕೆಂದು ಆದೇಶಿಸಲು ಕೋರಿರುತ್ತಾರೆ.

3. ಈ ಹಂತದಲ್ಲಿ ಪ್ರಕರಣದ ದೂರಿಗೆ ಸಂಬಂಧಿಸಿದಂತೆ ವರದಿ ಸಲ್ಲಿಸಲುವಂತೆ ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಉಡುಪಿ ಇವರಿಗೆ ಕೋರಲಾಗಿದ್ದು, ಸದರಿಯವರು ವರದಿ ಸಲ್ಲಿಸಿ, ಉಡುಪಿ ತಾಲ್ಲೂಕು ಮೂಡುಬೆಳ್ಳೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೆಳ್ಳೆ ಗ್ರಾಮದ ಸರ್ವೇ ನಂಬರ್ 318/2ಎ ರಲ್ಲಿ ಆರ್‌ಟಿಸಿ ಆಕಾರ್‌ಬಂದ್ ನಂತೆ 4.51 ಎಕರೆ ಸ್ಥಳ ಇರುತ್ತದೆ. ಈ ಸ್ಥಳವು ಮೂಲ ಅಡಂಗಲ್‌ನಲ್ಲಿ ಸರ್ವೇ ನಂ.318/2ಎ 4.51 ಎಕರೆ ಅನಾಧೀನ ಎಂದು ದಾಖಲಾಗಿದ್ದು, ಸರ್ಕಾರಿ ಸ್ಥಳವಾಗಿರುತ್ತದೆ. ಕೆರೆ ಎಂಬ ಬಗ್ಗೆ ದಾಖಲೆಗಳು ಇರುವುದಿಲ್ಲ. ಪರಂಬೋಕು (ಎಂದರೆ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ ಖರಾಬು) ಎಂದು ದಾಖಲಾಗಿರುವುದಿಲ್ಲ. ಆರ್‌ಟಿಸಿ ಮತ್ತು

ಆಕಾರ್‌ಬಂದ್‌ಗಳಲ್ಲಿ ಕುಶ್ಕಿ ಸ್ಥಳ ಎಂದು ದಾಖಲಾಗಿರುತ್ತದೆ. ಫೈಸಲ್ ಪತ್ರಿಕೆಯಲ್ಲಿ ಕುಶ್ಕಿ ಬಾಬ್ತಿನಲ್ಲಿ ದಾಖಲಾಗಿದ್ದು, ಸರ್ವೇ ನಂ.318/2ಎ ಕುಶ್ಕಿ 0.60 ಸ್ಥಳದ ಎಕರೆ 1ರ ಕಂದಾಯ ಒಟ್ಟು ಕಂದಾಯ 2.71 ರೂಪಾಯಿ ಎಂದು ಕಂದಾಯ ದಾಖಲಾಗಿರುತ್ತದೆ. ಆದ್ದರಿಂದ, ಇದು ಪೊರಂಬೋಕು ಕೆರೆಯಾಗಿರುವುದು ಕಂಡು ಬರುವುದಿಲ್ಲ. ದಾಖಲೆಗಳ ಪ್ರಕಾರ ಸರ್ಕಾರಿ ಅನಾಧೀನ ಸ್ಥಳವಾಗಿರುವುದು ಕಂಡು ಬಂದಿರುತ್ತದೆ. ಆದರೆ, ಸರ್ವೇ ನಂ.318/2ಎರ 1967–68ನೇ ಸಾಲಿನ ಆರ್‌ಟಿಸಿಯಲ್ಲಿ ಕೆರೆ ಬಾವಿ ಎಂದು ದಾಖಲಾಗಿರುವುದು ಕಂಡು ಬಂದಿರುತ್ತದೆ. ಅದರ ನಂತರದ ಆರ್‌ಟಿಸಿ ಗಳಲ್ಲಿ ಇದೇ ದಾಖಲೆಯನ್ನು ಮುಂದುವರೆಸಿರುತ್ತಾರೆ. ಆದರೆ, ವಾಸ್ತವದಲ್ಲಿ ಸದರಿ ಸ್ಥಳ ಆಳವಾದ ಪ್ರದೇಶವಾಗಿದ್ದು, ನೀರು ನಿಂತ ಕೆರೆಯಾಗಿರುತ್ತದೆ. ಹಾಲಿ ಕೆರೆಯಾಗಿ ಬಳಕೆಯಲ್ಲಿರುತ್ತದೆ. ಆದರೆ, ದಾಖಲೆಗಳ ಪ್ರಕಾರ ಕೆರೆಯಾಗಿರುವುದಿಲ್ಲ. ಸರ್ವೇ ನಂ.280/7ರ 0.95 ಎಕರೆ, ಸರ್ವೇ ನಂ.282/1ರ 1.35 ಎಕರೆ ಸ್ಥಳಗಳು ಮೂಲ ದಾಖಲೆಗಳಾದ ಅಡಂಗಲ್, ಆಕಾರ್‌ಬಂದ್ ಮತ್ತು ಫೈಸಲ್ ಪತ್ರಿಕೆಗಳಲ್ಲಿ ಪೊರಂಬೋಕು ಕರಾಬು ಬಾಬಿನಲ್ಲಿ ಕೆರೆ ಎಂದು ದಾಖಲಾಗಿದ್ದು, ಈ ಎರಡು ಸರ್ವೇ ನಂಬರ್ ಗಳು ಮೂಲದಿಂದ ಕೆರೆಯಾಗಿರುತ್ತದೆ. ಶ್ರೀ ಹೆರಾಲ್ಡ್ ಡಿಸೋಜ ರವರು ಸಲ್ಲಿಸಿದ ದೂರಿನನ್ವಯ ಭೂಮಾಪಕರ ಮೂಲಕ ಸರ್ವೇ ನಂ.318/2ಎ ರ ಸ್ಥಳ ಅಳತೆ ಮಾಡಿಸಲಾಗಿದ್ದು, ರೋಬೋರ್ಟ್ ಆಳ್ವ ರವರು ಸರ್ವೇ ನಂ.318/2ಎ ಸ್ಥಳ ಅತಿಕ್ರಮ ಮಾಡಿರುವುದಿಲ್ಲ. ಇವರ ಸ್ಥಳ ಸರ್ವೇ ನಂ.318/1ಎ ಯಲ್ಲಿನ 0.38 ಎಕರೆ, 318/1ಬಿಯ 0.54 ಎಕರೆ, 318/1ಸಿ 1.00 ಎಕರೆಯಾಗಿದ್ದು, ಪ್ರತ್ಯೇಕವಾಗಿ ಅನುಭವದಲ್ಲಿ ಇರುತ್ತದೆ ಎಂದು ತಿಳಿಸಿರುತ್ತಾರೆ.

4. ಸದರಿ ಪೊಲೀಸ್ ನಿರೀಕ್ಷಕರ ವರದಿಗೆ ದೂರುದಾರರು ಉತ್ತರಿಸಿ ಸರ್ಕಾರಿ ಕೆರೆಯ ಮೇಲೆ ಯಾವುದೇ ರಸ್ತೆಯಾಗಲೀ, ಕಾಲುದಾರಿಯಾಗಲೀ ಇರುವುದಿಲ್ಲ. ಸರ್ವೆ ನಂ.318/2ಎ ಸುತ್ತಮುತ್ತ ದಟ್ಟ ಕಾಡು ಬೆಳೆದಿದ್ದು, ಈ ಕೆರೆಯ ಸುತ್ತಮುತ್ತ ಕೆರೆಯ ಜಮೀನು ಬಿಟ್ಟು ಅನೇಕರ ಜಮೀನು ಇರುತ್ತದೆ. ಈ ಎಲ್ಲ ಜಮೀನುಗಳನ್ನು ರಾಜಕಾರಣಿ ಒಬ್ಬರೆ ಪಡೆದಿರುತ್ತಾರೆ. ಈ ಜಮೀನಿಗೆ ರಸ್ತೆ ಸಂಪರ್ಕ ಇರುವುದಿಲ್ಲ. ಈ ಕೆರೆಗೆ ಮಣ್ಣು ತುಂಬಿಸಿ ತಾವು ಕ್ರಯಕ್ಕೆ ಪಡೆದ ಎಲ್ಲ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸಲು ಸರ್ಕಾರಿ ಹಣದಿಂದ ಸರ್ಕಾರಿ ಕೆರೆಗೆ ಮಣ್ಣು ತುಂಬಿಸಿ ರಸ್ತೆ ನಿರ್ಮಿಸಿದ್ದಾರೆ. ಪಿಡಬ್ಲ್ಯೂಡಿ ಅಧಿಕಾರಿಗಳು ಸದರಿ ಕೆರೆಯಲ್ಲಿ ರಸ್ತೆ ಇದ್ದ ಬಗ್ಗೆ ಯಾವುದೇ ದಾಖಲಾತಿ ಇಲ್ಲವೆಂದು ತಿಳಿಸಿರುತ್ತಾರೆ. ಸದರಿ 318/2ಎ ಸರ್ವೇ ನಂಬರ್‌ನಲ್ಲಿ ಶ್ರೀಮತಿ ಲಲಿತಾ ಪೂಜಾರ್ತಿಯವರು ಜಮೀನನ್ನು ಅತಿಕ್ರಮಣಗೊಳಿಸಿರುವುದು ಕಂಡು ಬರುತ್ತದೆ. ನಕ್ಷೆಯಲ್ಲಿ ಒತ್ತುವರಿಯಾಗಿರುವುದು ದೃಡಪಡುತ್ತದೆ. ಆದರೆ, ತನಿಖಾಧಿಕಾರಿಯವರು ನೀಡಿರುವ ವರದಿಯಲ್ಲಿ ಒತ್ತುವರಿಯಾಗಿಲ್ಲವೆಂದು ತಿಳಿಸಿರುತ್ತಾರೆ. ಇದಲ್ಲದೇ ಒತ್ತುವರಿಯನ್ನು

ತೆರವುಗೊಳಿಸಲಾಗಿದ್ದು, ಸದರಿ ಒತ್ತುವರಿ ಜಾಗ ತೆರವಾಗಿದೆ ಎಂದು ಸುಳ್ಳು ವರದಿ ನೀಡಿರುತ್ತಾರೆ. ಆದ್ದರಿಂದ, ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

5. ದೂರಿನಂಶಗಳನ್ನು, ಹಾಜರುಪಡಿಸಿರುವ ದಾಖಲೆಗಳನ್ನು, ಎದುರುದಾರರ ವರದಿಯನ್ನು, ತನಿಖಾಧಿಕಾರಿಯಾದ ಪೊಲೀಸ್ ನಿರೀಕ್ಷಕರ ವರದಿಯನ್ನು ಪರಿಶೀಲಿಸಲಾಗಿ, ಸರ್ವೇ ನಂಬರ್ 318 ಅನಾಧಿಕಾಲದಿಂದಲೂ ಬೆಳ್ಳೆ ಗ್ರಾಮದಲ್ಲಿ ಇದ್ದು, ಅದರ ವಿಸ್ತೀರ್ಣ 4 ಎಕರೆ 51 ಗುಂಟೆ ಇರುತ್ತದೆ ಎಂದು ಸೆಟಲ್‌ಮೆಂಟ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್ ನಿಂದ ಕಂಡು ಬರುತ್ತದೆ. ಸರ್ವೇ ನಂ.318ರ ಆರ್‌ಟಿಸಿ ಯನ್ನು ಪರಿಶೀಲಿಸಿದಲ್ಲಿ ಬೆಳ್ಳೆ ಗ್ರಾಮದ ಸರ್ವೇ ನಂ.318/2ಎ ಜಮೀನಿಗೆ ಸಂಬಂಧಿಸಿದಂತೆ 1967–68ರ ಸಾಲಿಗೆ ಸಂಬಂಧಿಸಿದ ಆರ್‌ಟಿಸಿಯ ಪ್ರತಿಯನ್ನು ಹಾಜರುಪಡಿಸಿದಲಾಗಿದೆ. ಅದರೊಳಗೆ ಕಾಲಂ ನಂ. 9 ರಲ್ಲಿ ಸ್ವಾಧೀನದಾರರ ಹೆಸರನ್ನು ಸರ್ಕಾರಿ ಎಂದು ತೋರಿಸಲಾಗಿದೆ. ಕಾಲಂ ನಂ.11 (ಇತರೆ ಹಕ್ಕುಗಳು ಮತ್ತು ಋಣಗಳು ಎಂಬ ಕಾಲಂನಲ್ಲಿ) ರಲ್ಲಿ ರೋಬೋರ್ಟ್ ಆಳ್ವ, ಬಾವಿ ಕೆರೆ ಎಂದು ನಮೂದಿಸಿರುವುದು ಕಂಡು ಬರುತ್ತದೆ. ಬೆಳ್ಳೆ ಗ್ರಾಮದ ಅಡಂಗಲ್ ನಕಲನ್ನು ಹಾಜರುಪಡಿಸಿದ್ದು, ಅದರಲ್ಲಿ ಸರ್ವೇ ನಂ.318/2ಎ ಯ ಜಮೀನಿಗೆ ಸಂಬಂಧಿಸಿದಂತೆ ಅನಾಧೀನ ಎಂದು ನಮೂದಿಸಿರುವುದು ಕಂಡು ಬರುತ್ತದೆ. ಕಛೇರಿಯ ಟಿಪ್ಪಣಿಯ ಪ್ರತಿಯನ್ನು ಹಾಜರುಪಡಿಸಿದ್ದು, ಇದನ್ನು ಪರಿಶೀಲಿಸಿದಲ್ಲಿ ಟಿಪ್ಪಣಿಯ ವಿಷಯವು ಬೆಳ್ಳೆ ಗ್ರಾಮದ ಸರ್ವೇ ನಂ.318/2ಎ ಯ 4.51 ಎಕರೆ ಸರ್ಕಾರಿ ಜಾಗಕ್ಕೆ ಸಂಬಂಧಿಸಿದ್ದಾಗಿದ್ದು, ಇದರಲ್ಲಿ ಕಾಪು ಕಂದಾಯ ನಿರೀಕ್ಷಕರ ವರದಿಯಂತೆ ಬೆಳ್ಳೆ ಗ್ರಾಮದ ಸರ್ವೇ ನಂ.318/2ಎ ಯ ಪಹಣಿಯ ಕಾಲಂ 11ರಲ್ಲಿ ರೋಬೋರ್ಟ ಆಳ್ವರ ಹೆಸರು ತಪ್ಪಾಗಿ ದಾಖಲಾಗಿರುವುದಾಗಿಯೂ, ಸದರಿಯವರ ಹೆಸರನ್ನು ರದ್ದುಪಡಿಸಬಹುದಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

6. ಮುಂದುವರೆದು, ಸರ್ವೇ ನಂಬರ್ 318/2ಎ ಯ ಸರ್ಕಾರಿ ಜಮೀನಿನಲ್ಲಿ ಲಲಿತಾ ಪೂಜಾರ್ತಿ ಹಾಗೂ ಅಚ್ಚು ಪೂಜಾರ್ತಿ ರವರು ಆಕ್ರಮಣ ಮಾಡಿದ್ದು, ಅದು ನಮೂನೆ 53ರ ರಿಜಿಸ್ಟರ್ ನಲ್ಲಿ ಕ್ರಮ ಸಂಖ್ಯೆ:92, 93, 94 ರಂತೆ ವಹಿಯಲ್ಲಿ ದಾಖಲಾತಿಯಾಗಿರುವುದಾಗಿಯೂ, ಅರ್ಜಿ ತನಿಖಾ ಹಂತದಲ್ಲಿರುವುದಾಗಿ, ರೋಬೋರ್ಟ್ ಆಳ್ವರಿಗೆ ಸರ್ವೇ ನಂ.318/1ಎ ಯಲ್ಲಿ 0.38 ಎಕರೆ, ಸರ್ವೇ ನಂ.310/1ಬಿ ಯಲ್ಲಿ 0.54 ಎಕರೆ, ಸರ್ವೇ ನಂಬರ್:318/16ರಲ್ಲಿ 1 ಎಕರೆ ಜಮೀನು ಇರುವುದಾಗಿಯೂ ವರದಿ ಮಾಡಿರುತ್ತಾರೆ. ಇದಲ್ಲದೇ, ಸರ್ವೇ ನಂ.318ರ ಜಮೀನಿನ ಪಹಣಿಯ ಕಾಲಂ6ರಲ್ಲಿ ಡಿಸಿ ರಿಸರ್ವ ಎಂದು ನಮೂದು ಕಂಡು ಬರುತ್ತದೆ. ಡಿಸಿ ರಿಸರ್ವ ಜಮೀನು ಶ್ರೀ ಆಲ್ಪಾನ್ಸೋ.ಶೆ.ಆಳ್ವ ಎಂಬುವವರಿಗೆ ಮಂಜೂರಾಗಲು ಕಾಯ್ದೆಯಲ್ಲಿ ಆಸ್ಪದ ಕಂಡು ಬರುವುದಿಲ್ಲ. ಲಲಿತಾ ಪೂಜಾರ್ತಿ ಹಾಗೂ ಅಚ್ಚು

ಪೂಜಾರ್ತಿ ಸಹ ಡಿಸಿ ರಿಸರ್ವ ಜಮೀನನ್ನು ಸಕ್ರಮೀಕರಣಕ್ಕೆ ಅರ್ಹರಾಗಿರುವುದಿಲ್ಲ. ಬೆಳ್ಳೆ ಗ್ರಾಮದ ಗ್ರಾಮ ಕರಣೀಕರು ಈ ಹಿಂದೆಯೇ ನಮೂನೆ 53ರ ಅರ್ಜಿಯನ್ನು ತಿರಸ್ಕರಿಸಲು ಕ್ರಮ ಕೈಗೊಳ್ಳಬೇಕಿತ್ತು. ಈಗಲಾದರೂ ಗ್ರಾಮ ಕರಣೀಕರು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕಾಗಿದ್ದು, ಇನ್ನು ವಿಳಂಭ ಮಾಡಿದ್ದಲ್ಲಿ ಸಂಬಂಧಪಟ್ಟವರ ಕರ್ತವ್ಯಲೋಪವೆಂದು ಪರಿಗಣಿಸಬಹುದಾಗಿದೆ. ಆಕ್ರಮಣ ಮಾಡಿದವರ ನಮೂನೆ 53ಅನ್ನು ತಿರಸ್ಕರಿಸಲು ಎಂಸಿಆರ್ ವಿಷಯನಿರ್ವಾಹಕರು ಹಾಗೂ ಗ್ರಾಮಕರಣೀಕರು ತಕ್ಷಣ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಟಿಪ್ಪಣಿ ಇರುವುದು ಕಂಡು ಬರುತ್ತದೆ. ಕೆರೆಗಳ ಪಟ್ಟಿಯನ್ನು ಪರಿಶೀಲಿಸಿದಾಗ ಒತ್ತುವರಿ ದಾಖಲಾತಿ ಇರುವುದಿಲ್ಲ.

7. ಶ್ರೀ ಆಲ್ಫಾನ್ಸೋ ಆಳ್ವರ ಹೇಳಿಕೆಯಲ್ಲಿ ಕೆರೆ ಒತ್ತುವರಿ ಮಾಡಿರುವುದಿಲ್ಲ. ಸರ್ವೇನಂ.318/2ಎ ಯ 4.51 ಎಕರೆ ಜಾಗದ ಪಹಣಿಯ ಕಾಲಂ 11 ರಲ್ಲಿ ರೋಬೋರ್ಟ್ ಡಿಸಿಲ್ವ ರವರ ಹೆಸರನ್ನು ತಪ್ಪಾಗಿ ದಾಖಲಾಗಿದ್ದು, ಅದನ್ನು ವಜಾ ಮಾಡುವಂತೆ ಕಂದಾಯ ನಿರೀಕ್ಷಕರು ಕೋರಿರುವುದಾಗಿ ನಮೂದಿಸಲಾಗಿದೆ. ಕಂದಾಯ ನಿರೀಕ್ಷಕರ ವರದಿಯನ್ನು ಹಾಜರುಪಡಿಸಲಾಗಿದೆ. ಸದರಿ ವರದಿಯಲ್ಲಿ ರೋಬೋರ್ಟ ಆಳ್ವ ಹೆಸರನ್ನು ತಪ್ಪಾಗಿ ದಾಖಲಾಗಿರುವುದನ್ನು ರದ್ದುಪಡಿಸುವಂತೆ ಶಿಫಾರಸ್ಸು ಮಾಡಿರುವುದಾಗಿ ತಿಳಿಸಿರುತ್ತಾರೆ. ಕಂದಾಯ ನಿರೀಕ್ಷಕರಿಗೆ ದಿವಂಗತ ರೋಬೋರ್ಟ್ ಆಳ್ವ ರವರ ಮಗ ಶ್ರೀ ಆಲ್ಫಾನ್ಸೋ ರವರು ಸಹ ಹೇಳಿಕೆ ನೀಡಿದ್ದು, ಅವರು ಸಹ ತಮ್ಮ ಹೆಸರನ್ನು ಸರ್ವೆ ನಂಬರ್:318/2ಎ ಯ 4.51 ಎಕರೆ ಜಮೀನಿಗೆ ಸಂಬಂಧಿಸಿದ ಆರ್‌ಟಿಸಿ ಯಲ್ಲಿ ತನ್ನ ತಂದೆಯ ಹೆಸರು ದಿವಂಗತ ರೋಬೋರ್ಟ್ ಆಳ್ವರವರ ಹೆಸರನ್ನು ತಪ್ಪಾಗಿ ನಮೂದಿಸಲಾಗಿರತ್ತದೆ ಎಂದು ಹಾಗೂ ಸದರಿ ಹೆಸರನ್ನು ತೆಗೆದುಹಾಕಬೇಕೆಂದು ಕೋರಿರುವುದು ಕಂಡುಬರುತ್ತದೆ. ಸದರಿ ಹೇಳಿಕೆಯ ಪ್ರತಿಯನ್ನು ಹಾಜರುಪಡಿಸಲಾಗಿದೆ. ಎಂಸಿಆರ್ 75/12–13ರ ಕಡತಕ್ಕೆ ಸಂಬಂಧಿಸಿದ ಟಿಪ್ಪಣಿ ಕ್ರಸಂ. ಕಂಡಿಕೆ 9 ರಲ್ಲಿ ಕಂಡಿಕೆ 8ರ ಆದೇಶದಂತೆ "ಅಡಂಗಲ್ ನಕಲು, ಫೈಸಲ್ ಪತ್ರಿಕೆ ನಕಲು, ಎಫ್‌ಎಂಬಿ ನಕಲು, ಪಹಣಿ ನಕಲು ಇವುಗಳನ್ನು ಪರಿಶೀಲಿಸಿದಾಗ, ಅಡಂಗಲ್ ದಾಖಲೆಯಂತೆ ಮತ್ತು ಫೈಸಲ್ ಪತ್ರಿಕೆಯಂತೆ ಸರ್ವೆ ನಂಬರ್ 318/2ಎ ಜಮೀನಿನ ಆರ್‌ಟಿಸಿಯ ಕಾಲಂ 6ರಲ್ಲಿ ಡಿಸಿ ರಿಸರ್ವ್ ಎಂದು ದಾಖಲು ಇದೆ ಎಂದು, ಡಿಸಿ ಮನ್ನ ರಿಜಿಸ್ಟರ್ ಪರಿಶೀಲಿಸಲಾಗಿ ಅದರಂತೆ ಸರ್ವೆ ನಂಬರ್ ದಾಖಲಾಗಿರುವುದಿಲ್ಲ" ವೆಂದು ನಮೂದಿಸಿರುವುದು ಕಂಡು ಬಂದಿರುತ್ತದೆ. ಖಂಡಿಕೆ 10 ರಲ್ಲಿ "ಒತ್ತುವರಿದಾರರಾದ ಶ್ರೀಮತಿ ಲಲಿತಾ ಪೂಜಾರಿ ರವರ ಮಂಜೂರಾತಿ ಅಪೇಕ್ಷಿಸಿ ನೀಡಿರುವ ನಮೂನೆ 53ರ ಕಡತ ಲಗತ್ತಿಸಲಾಗಿದೆ. ಕಂದಾಯ ನಿರೀಕ್ಷಕರ ತನಿಖಾ ವರದಿಯಂತೆ ಡಿಸಿ ರಿಸರ್ವ್ ಜಮೀನಾಗಿರುವುದರಿಂದ ತಿರಸ್ಕರಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಅಕ್ರಮ ಸಕ್ರಮ ಸಮಿತಿಯ ಕಛೇರಿ ಟಿಪ್ಪಣಿಯಲ್ಲೂ ಸಹ ಡಿಸಿ ರಿಸರ್ವ್

ಎಂಬ ಕಾರಣಕ್ಕೆ ತಿರಸ್ಕರಿಸಲು ವರದಿಸಿರುತ್ತಾರೆ” ಎಂದು ನಮೂದಾಗಿರುವುದು ಕಂಡು ಬರುತ್ತದೆ. 1967-68ನೇ ಸಾಲಿಗೆ ಸಂಬಂಧಿಸಿದ ಸರ್ವೇ ನಂಬರ್ 318/2ಎ ಯ ಪಹಣಿ ಪತ್ರಿಕೆಯಲ್ಲಿ ಕಾಲಂ 9 ರಲ್ಲಿ ಸರ್ಕಾರಿ ಎಂದು ನಮೂದಿದ್ದು, ಕಾಲಂ 12 ರಲ್ಲಿ ಸರ್ಕಾರಿ ಮತ್ತು ರೋಬೋರ್ಟ್ ಆಳ್ವ ಎಂದು ನಮೂದಿದ್ದು, ಸಾಗುವಳಿಯ ಪದ್ಧತಿ ಎಂದು ಇರುವ ಕಾಲಂನಲ್ಲಿ ಆಕ್ರಮಣ ಎಂದು ಇರುವುದು ಕಂಡು ಬರುತ್ತದೆ. ಸದರಿ ಆರ್‌ಟಿಸಿ ಯನ್ನು ಹಾಜರುಪಡಿಸಲಾಗಿದೆ. ದಿ: 05/10/2016 ರಂದು ಸರ್ವೇ ನಂ.318/2ಎ ಗೆ ಸಂಬಂಧಿಸಿದ ಗಣಕೀಕೃತ ಪಹಣಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಿದಲ್ಲಿ, ಸದರಿ ಜಮೀನು ಸರ್ಕಾರಿ ಎಂದು ಕಾಲಂ 9 ರಲ್ಲಿ ನಮೂದಾಗಿರುವುದು ಕಂಡು ಬರುತ್ತದೆ ಹಾಗೇಯೇ ವಿಸ್ತೀರ್ಣ ವನ್ನು 4.51 ಎಕರೆ ಎಂದು ನಮೂದಿಸಿರುವುದು ಕಂಡು ಬರುತ್ತದೆ. ಕಾಲಂ 11 ರಲ್ಲಿ ಬಾವಿಕೆರೆ ಎಂದು ನಮೂದಾಗಿರುವುದು ಸಹ ಕಂಡು ಬರುತ್ತದೆ. ಸದರಿ ಆರ್‌ಟಿಸಿ ಪ್ರತಿಯನ್ನು ಹಾಜರುಪಡಿಸಲಾಗಿದೆ. ತಾಲ್ಲೂಕು ಭೂಮಾಪಕರು ನೀಡಿರುವ ನಕ್ಷೆಯ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಸರ್ವೇ ನಂಬರ್ 380/7ಅನ್ನು ಸರ್ಕಾರಿ ಅನಾಧೀನ ಎಂದು ಇದ್ದು, ಷರಾ ಕಾಲಂ ನಲ್ಲಿ ಕೆರೆ ಇರುವ ಸ್ಥಳ ಯಾವುದೇ ಒತ್ತುವರಿ ಇರುವುದಿಲ್ಲವೆಂದು ನಮೂದಾಗಿರುತ್ತದೆ. ಹಾಗೆಯೇ ಸರ್ವೇ ನಂ.282/1 ಅನ್ನು ಸರ್ಕಾರಿ ಅನಾಧೀನ ಎಂದು ತೋರಿಸಿದ್ದು, ಷರಾ ಕಾಲಂನಲ್ಲಿ ಕೆರೆ ಇರುವ ಸ್ಥಳ ಯಾವುದೇ ಒತ್ತುವರಿ ಇರುವುದಿಲ್ಲವೆಂದು ನಮೂದಿಸಲಾಗಿದೆ. ಸರ್ವೇ ನಂ.318/2ಎ ಗೆ ಸಂಬಂಧಿಸಿದಂತೆ ಸರ್ಕಾರಿ ಅನಾಧೀನ ಎಂದು ಇದ್ದು, ಷರಾ ಕಾಲಂನಲ್ಲಿ ಕೆರೆ ಇದ್ದು, ಬಾವಿ ಇರುವ ಸ್ಥಳ ಎಂದು ತೋರಿಸಲಾಗಿದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಬೆಳ್ಳೆ ಗ್ರಾಮದ ಸರ್ವೇ ನಂಬರ್:318/2ಎ ಯ 4.51 ವಿಸ್ತೀರ್ಣದ ಜಾಗವು ಕೆರೆ ಎಂಬುದು ಸ್ಪಷ್ಟ ಪಡುತ್ತದೆ ಹಾಗೆಯೇ ಸದರಿ ಕೆರೆಯಲ್ಲಿ ರೋಬೋರ್ಟ್ ಆಳ್ವರವರು ಅದನ್ನು ಒತ್ತವರಿ ಮಾಡಿ ಬಾವಿ ನಿರ್ಮಿಸಿರುವುದು ಸ್ಪಷ್ಟ ಪಡುತ್ತದೆ. ಇದಲ್ಲದೇ, ಸದರಿ ಜಾಗಕ್ಕೆ ಅಕ್ರಮ ಸಕ್ರಮದಡಿ ಅನೇಕ ಜನರು ಅರ್ಜಿ ಸಲ್ಲಿಸಿ ಜಾಗ ಮಂಜೂರಾತಿ ಕೋರಿರುವುದು ಸಹ ಕಂಡುಬಂದಿರುತ್ತದೆ.

8. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕು ಬೆಳ್ಳೆ ಗ್ರಾಮದ ಸರ್ವೇ ನಂ.318/2ಎ ಯ 4.51 ಎಕರೆ ಜಾಗ ಕೆರೆಯಾಗಿದ್ದು, ಸದರಿ ಜಾಗದಲ್ಲಿ ಒತ್ತುವರಿಯಾಗಿರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಸದರಿ ಕೆರೆ ಒತ್ತುವರಿಯನ್ನು ತೆರವುಗೊಳಿಸಿ, ಒತ್ತುವರಿ ಜಾಗವನ್ನು ಸರ್ಕಾರದ ಸುಪರ್ಧಿಗೆ ಪಡೆದು, ಕೆರಯ ನಿರ್ವಹಣೆ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ

ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 27/2/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

25/2/17